# ಜನಪದ ಮಹಾಕಾವ್ಯಗಳು: ಸ್ತ್ರೀವಾದಿ ಓದು.



**ಲೇಖಕ: ಬಿ.ಆರ್.ಗಣೇಶ, ಕನ್ನಡ ಶಿಕ್ಷಕ**

ದಕ್ಷಿಣ ಕರ್ನಾಟಕದ ಎರಡು ಮಹಾಕಾವ್ಯಗಳಾದ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳು ಸ್ತ್ರೀವಾದಿ ಅಧ್ಯಯನ ದೃಷ್ಟಿಯಿಂದ ಮಹತ್ವದ ಕಾವ್ಯಗಳಾಗಿವೆ. ಮಲೆಮಾದೇಶ್ವರ ದಟ್ಟಕಾಡಿನಲ್ಲಿ ಬೀಡುಬಿಟ್ಟ ಜನರ ದೇವನಾದರೆ, ಮಂಟೇಸ್ವಾಮಿ ಕೃಷಿ ಕೇಂದ್ರಿತ ಗ್ರಾಮೀಣ ಪ್ರದೇಶದವರ ದೇವನಾಗಿದ್ದಾನೆ. ಜನಜೀವನದ ದೃಷ್ಟಿಯಿಂದ ಇಬ್ಬರು ಭಿನ್ನರು. ಕಾಡು ಸಂಸ್ಕೃತಿಯಿಂದ ನಾಡು ಸಂಸ್ಕೃತಿಯ ಕಡೆ ಚಲಿಸುವ ಹಾಗೂ ಮಾತೃಮೂಲ ವ್ಯವಸ್ಥೆಯಿಂದ ಪಿತೃಮೂಲ ವ್ಯವಸ್ಥೆಯ ಕಡೆಗೆ ಸಾಗುತ್ತಿರುವ ಸಂಸ್ಕೃತಿಯ ಅನಾವರಣವನ್ನು ಕಾಣುತ್ತೇವೆ. ಇಷ್ಟಲ್ಲದೆ ಶೈವ ಕೇಂದ್ರಿತ ನೆಲೆಯಾಗಿ ರೂಪುಗೊಳ್ಳುತ್ತದೆ. ಕಾಡಿನ ಜನರು ಪರಿಸರ ಆರಾಧನೆಯಿಂದ ಏಕದೇವೋಪಾಸಕರಾಗುವ ಈ ನಡಿಗೆಯಲ್ಲಿ ಅವರ ಜೀವನಕ್ರಮದಲ್ಲಿ ಹಲವಾರು ಬದಲಾವಣೆಗಳು ಆಗಿವೆ. ಮಂಟೇಸ್ವಾಮಿ ಶೈವ/ವೈಷ್ಣವ ಮಿಶ್ರನೆಲೆಯಾಗಿ ರೂಪಗೊಂಡು, ಕೃಷಿ ಪ್ರಧಾನ ನೆಲೆಗಳಲ್ಲಿ ತನ್ನ ಕೇಂದ್ರಗಳನ್ನು ಸ್ಥಾಪಿಸಿದ್ದು, ಇಲ್ಲೆಲ್ಲಾ ಮೊದಲು ವೈಷ್ಣವ ಮೂಲದ ಜನರ ವಾಸ್ತವ್ಯ ಇದ್ದಿರಬಹುದು. ತದನಂತರದಲ್ಲಿ ಶೈವವೈಷ್ಣವಗಳ ಸಂಗಮದಂತೆ ಮಂಟೇಸ್ವಾಮಿ ಸಂಸ್ಕೃತಿ ಕಂಡುಬರುತ್ತದೆ. ಇದಕ್ಕೆ ಕಾವ್ಯದಲ್ಲೂ ಹಲವು ಪುರಾವೆಗಳು ದೊರೆಯುತ್ತವೆ.

ಈ ಎರಡು ಕಾವ್ಯಗಳು ಪ್ರಾರಂಭವಾಗುವುದೇ ಜಗದ ಉಗಮದ ಕತೆಯನ್ನು ಹೇಳುವ ಮೂಲಕ. ಮಾದೇಶ್ವರ ಕಾವ್ಯದ 'ಶಕ್ತಿ ಕವಟ್ಲು', ಮಂಟೇಸ್ವಾಮಿ ಕಾವ್ಯದ 'ಜಗತ್ತು ಸೃಷ್ಟಿಯ ಸಾಲು'ಗಳನ್ನು ನೋಡಿದಾಗ; ಮಾದೇಶ್ವರ ಕಾಡಿನ ಸಂಸ್ಕೃತಿಯಿಂದ ನಾಡಿನ ಸಂಸ್ಕೃತಿಯತ್ತ ಸ್ಥಿತ್ಯಂತರಗೊಂಡ ಹಾಗೆಯೇ ಮಾತೃಮೂಲಿಯ ಕುಟುಂಬ ವ್ಯವಸ್ಥೆಯಿಂದ ಪಿತೃಮೂಲಿಯ ವ್ಯವಸ್ಥೆಯ ಕಡೆ ಸಾಗಿದ ಕತೆಯಾಗಿ ಕಂಡುಬರುತ್ತದೆ. ಮಂಟೇಸ್ವಾಮಿ ಕಾವ್ಯ ಪಿತೃಪ್ರಧಾನತೆಯು ನೆಲೆನಿಂತ ಸಮಾಜದ ಕತೆಯಾಗಿದೆ. ಕೃಷಿ ಸಂಸ್ಕೃತಿಯು ಗ್ರಾಮದೇವತೆಗಳ ಆರಾಧನೆಗಳಿಂದ ಮಂಟೇಸ್ವಾಮಿ ಆರಾಧನೆಯತ್ತ ಸಾಗಿದ ಬದುಕಿನ ಕತೆಯಾಗಿದೆ. ನದಿಯ ತಟದಲ್ಲಿ ಈತನ ನೆಲೆಗಳು ಇರುವುದು ಮತ್ತು ಕೃಷಿ ಪರಿಕರಗಳನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದ ಪಂಚಾಳರನ್ನು ತನ್ನ ಶಿಶು ಮಕ್ಕಳನ್ನಾಗಿ ಮಾಡಿಕೊಳ್ಳುವ ಹೋರಾಟ ತನ್ನ ನೆಲೆಗಳನ್ನು ವಿಸ್ತರಿಸಲು ಬೇಕಾಗುವ ಸಂಪತ್ತನ್ನು ತನ್ನದಾಗಿಸಿಕೊಳ್ಳುವ ಮೂಲಕ ಶೈವ/ವೈಷ್ಣವ ಮಿಶ್ರವಾಗಿ ಪಿತೃಪ್ರಧಾನ ಸಂಸ್ಕೃತಿಯನ್ನು ವಿಸ್ತರಿಸುವ ಕತೆಯಾಗಿದೆ.

ಮುಖ್ಯವಾಗಿ ಈ ಎರಡು ಕಾವ್ಯಗಳು ವಚನ ಚಳುವಳಿಯೊಂದಿಗೆ ತಳಕು ಹಾಕಿಕೊಂಡಿವೆ. ಉತ್ತರ ಭಾಗದ ಭಕ್ತಿಯ ಅಲೆಗಳು ದಕ್ಷಿಣಕ್ಕೆ ಸಾಗಿ ಹೋಗಿ ವಿಸ್ತಾರಗೊಂಡವುಗಳಾದರೂ ಇವು ಪಡೆದುಕೊಂಡ ಸ್ವರೂಪ ಮಾತ್ರ ಭಿನ್ನವಾಗಿದೆ. ಕಾಡಿನ ಸೋಲಿಗರು, ಬಣಜಿಗರು, ಕುರುಬರು ಮುಂತಾದ ಜನರೊಂದಿಗೆ ಮಾದೇಶ್ವರ ತಮ್ಮ ತಳಗಳನ್ನು ವಿಸ್ತರಿಸಿಕೊಂಡರೆ, ಮಂಟೇಸ್ವಾಮಿ ಭಕ್ತರಲ್ಲಿ 'ಎಡಗೈನವರು, ಬಲಗೈನವರು, ಉಪ್ಪಾರರು, ಕುಂಬಾರಶೆಟ್ಟರು, ಮಡಿವಾಳಶೆಟ್ಟರು, ಹೆಗ್ಗಡೆಗೌಡಗಳು- ಈ ಮತದವರೇ ಹೆಚ್ಚಾಗಿದ್ದಾರೆ' [ಪುಟ:೧೩೨, ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು] ಮುಖ್ಯವಾಗಿ ಮೇಲಿನ ಈ ಜಾತಿಗಳು ಅತ್ಯಂತ ಅಸ್ಪೃಶ್ಯತೆಯಿಂದ ಅಂದಿಗಾಗಲೇ ಸಾಮಾಜಿಕ ಅಸಮಾನತೆಗೆ ಸಿಲುಕಿದ್ದವು. ಇಂತಹ ಅಸಮಾನತೆಯಿಂದ ಬಿಡುಗಡೆಗೊಳ್ಳುವ ಮತ್ತು ಮೇಲುಸ್ಥರದತ್ತ ಸಾಗುವ ತವಕದಲ್ಲಿ ಭಕ್ತರಿರುವಂತೆ ಕಾಣುತ್ತದೆ. ಇದರಿಂದಾಗಿಯೇ ನೀಲಗಾರರಲ್ಲಿ ವಿಭೂತಿ, ಗಂಧ ಧರಿಸುವುದು, ಭಿಕ್ಷಾಟನೆ ಮಾಡುವುದು,

ಉಪವಾಸ ಮಡಿ ಅಂತಹ ಕೆಲವು ಆಚರಣೆಗಳು ಇವರಲ್ಲಿ ಬಂದಿವೆ. ಗುಡ್ಡರಲ್ಲೂ ದೀಕ್ಷೆಯ ನಂತರ ಮುಟ್ಟು ಚಟ್ಟು, ಉಪವಾಸ ಆಚರಣೆಗಳು ಸೇರಿವೆ. ಸೋಮವಾರ ಪವಿತ್ರ ವಾರವಾಗಿ ಇಂದು ಅವರು ಆಚರಣೆ ಮಾಡುತ್ತಾರೆ.

## ಮಾತೃಮೂಲದಿಂದ ಪಿತೃಮೂಲದೆಡೆಗೆ:

ಮಲೆಮಾದೇಶ್ವರ ಕಾವ್ಯದಲ್ಲಿರುವ ಸೃಷ್ಟಿ ಮೂಲವನ್ನು ತಿಳಿಸುವ 'ಶಕ್ತಿ ಕವಟ್ಲು' ಮುಖ್ಯವಾಗಿ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಯಾಕೆಂದರೆ ಮಾತೃಮೂಲ ಕುಟುಂಬ ಪಿತೃಮೂಲ ಕುಟುಂಬ ವ್ಯವಸ್ಥೆಯ ಕಡೆ ಸ್ಥಿತ್ಯಂತರಗೊಂಡ ಅವಸ್ಥೆಯನ್ನು ಈ ಕಾವ್ಯ ಕಟ್ಟಿಕೊಡುತ್ತದೆ. ಸೃಷ್ಟಿಕರ್ತೆಯಾದ ಶಕ್ತಿಯು ತನಗೆ ಒಬ್ಬಳಿಗೆ ಬೇಸರವಾಗಿ ಸೃಷ್ಟಿ ವೈವಿಧ್ಯತೆಯನ್ನು ಕಾಣಲು ಸಂಗಾತಿಯನ್ನು ಬಯಸುತ್ತಾಳೆ. ಅವಳ ಮನದಲ್ಲಿ ಬಯಕೆ ಅಂಕುರಿಸಿದ ತಕ್ಷಣವೇ ತನ್ನ ಸಾಮರ್ಥ್ಯದ ಮೂಲಕ ಗಂಡನ್ನು ಸೃಷ್ಟಿಸುತ್ತಾಳೆ. ಮೊದಲ ಸೃಷ್ಟಿಯಾದ ಬ್ರಹ್ಮನನ್ನು ತನ್ನ ಗಂಡನಾಗುವಂತೆ ಕೇಳುತ್ತಾಳೆ. ಅವನು ನೀನೇ ಸೃಷ್ಟಿಸಿದ ಶಿಶುಮಗ ನಾನಾದುದರಿಂದ ನಿನ್ನ ಪತಿಯಾಗಲು ಸಾಧ್ಯವಿಲ್ಲ ಎನ್ನುತ್ತಾನೆ. ತಾಯಿ ಮತ್ತು ಮಗನ ನಡುವಿನ ಲೈಂಗಿಕ ಸಂಬಂಧ ಅಸಾಧ್ಯ ಎನ್ನುತ್ತಾನೆ. ಆಕೆ ಆತನನ್ನು ಸುಟ್ಟು ವಿಷ್ಣುವನ್ನು ಸೃಷ್ಟಿಸುತ್ತಾಳೆ. ಆತನಿಂದಲೂ ಅದೇ ಉತ್ತರ ಬರುತ್ತದೆ. ಬೇಸರಗೊಂಡ ಶಕ್ತಿ ಅವನನ್ನು ಭಸ್ಮ ಮಾಡಿ ತನ್ನ ಪ್ರಯತ್ನವನ್ನು ಬಿಡದೆ ಈಶ್ವರನನ್ನು ಸೃಷ್ಟಿಸುತ್ತಾಳೆ. ಶಿವ ಅವಳ ಪ್ರಸ್ತಾಪಕ್ಕೆ ಒಪ್ಪಿ ಅವಳಿಗೆ ಕೆಲವು ಶರತ್ತುಗಳನ್ನು ವಿಧಿಸುತ್ತಾನೆ. ಗಂಡ ಎಂದರೆ ಎಲ್ಲ ಬಲ್ಲವನಾಗಿರಬೇಕು. ಹೆಂಡತಿಗಿಂತ ಹೆಚ್ಚು ತಿಳಿದವನಾಗಿರಬೇಕು. ಆದರೆ ನನಗೆ ಯಾವುದೂ ಬರುವುದಿಲ್ಲ. ನಿನಗೆ ತಿಳಿದ ಸಮಸ್ತ ವಿದ್ಯೆಗಳನ್ನು ನನಗೆ ಕಲಿಸಿದರೆ ನಿನ್ನ ಗಂಡನಾಗಲು ಸಿದ್ಧ ಎನ್ನುತ್ತಾರೆ. ಅದರಂತೆ ಶಕ್ತಿ ಸೃಷ್ಟಿ, ಸ್ಥಿತಿ, ಲಯದ ಎಲ್ಲ ಕೆಲಸಗಳನ್ನು ಮರ್ಮಗಳನ್ನು ಆತನಿಗೆ ಕಲಿಸಿಕೊಡುತ್ತಾಳೆ. ನಂತರದಲ್ಲಿ ಪತಿಯಾಗುವಂತೆ ಕೇಳುತ್ತಾಳೆ. ಆದರೆ ಶಿವ ತನಗೆ, ನೀನು ಕಲಿಸಿದ ಎಲ್ಲ ವಿದ್ಯೆ ಗೊತ್ತಿದೆಯೋ ಎಂದು ತಿಳಿಯುವುದಾದರೂ ಹೇಗೆ? ಎಂದು ಕೇಳಿ, ಪರೀಕ್ಷಿಸುವುದಾಗಿ ತಿಳಿಸಿ ಎಲ್ಲವನ್ನೂ ಪರೀಕ್ಷಿಸುತ್ತಾ ಲಯದ ವಿದ್ಯೆಯನ್ನು ಶಕ್ತಿಯ ಮೇಲೆ ಪ್ರಯೋಗಿಸುತ್ತಾನೆ. ಆಕೆ ಸುಟ್ಟು ಬೂದಿಯಾಗುತ್ತಾಳೆ. ಆ ಬೂದಿಯಿಂದ ಮೂರು ಸ್ತ್ರೀಯರನ್ನು ಸೃಷ್ಟಿಸಿ ಅವರಿಗೆ ಸರಸ್ವತಿ, ಲಕ್ಷ್ಮೀ, ಪಾರ್ವತಿ ಎಂದು ನಾಮಕರಣ ಮಾಡುತ್ತಾನೆ. ಹಾಗೇ ಸುಟ್ಟು ಬಿದ್ದಿದ್ದ ಬ್ರಹ್ಮ ಮತ್ತು ವಿಷ್ಣುವಿನ ಬೂದಿಯಿಂದ ಅವರನ್ನು ಸೃಷ್ಟಿಸುತ್ತಾನೆ. ಅನಂತರದಲ್ಲಿ ಮೂರು ಜನ ಕ್ರಮವಾಗಿ ಬ್ರಹ್ಮ ಸರಸ್ವತಿಯನ್ನು, ವಿಷ್ಣು ಲಕ್ಷ್ಮೀಯನ್ನು ಮತ್ತು ಶಿವ ಪಾರ್ವತಿಯನ್ನು ವರಿಸಿ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಕಾರ್ಯವನ್ನು ಹಂಚಿಕೊಳ್ಳುತ್ತಾರೆ.

ಮೇಲಿನ ಕಥೆಯ ಸಾರಾಂಶವನ್ನು ನೋಡಿದಾಗ ಮುಖ್ಯವಾಗಿ ತಿಳಿದು ಬರುವ ಅಂಶಗಳೆಂದರೆ,

* ಭೂಮಿಯ ಉಗಮದಲ್ಲಿ ಮೊದಲು ಕಾಣಿಸಿಕೊಂಡ ಜೀವಿ ಹೆಣ್ಣು.
* ಹೆಣ್ಣಿನ ಸೃಷ್ಟಿಯೇ ಗಂಡು.
* ಸೃಷ್ಟಿ, ಸ್ಥಿತಿ ಮತ್ತು ಲಯಗಳ ಮೂರು ಕಾರ್ಯಗಳನ್ನು ಮಹಿಳೆಯೇ ನಡೆಸುತ್ತಿದ್ದಳು.
* ಲೋಕವನ್ನು ಮತ್ತಷ್ಟು ವೈವಿಧ್ಯಮಯ ಮಾಡುವ ಅವಳ ಕನಸು ಪುರುಷನ ಸೃಷ್ಟಿ.
* ತಾಯಿಯನ್ನು ಮಕ್ಕಳು ವರಿಸಬಾರದು, ತಾಯಿಯೊಂದಗಿನ ಲೈಂಗಿಕ ಸಂಬಂಧ ನಿಷಿದ್ಧ.
* ಪುರುಷನ ಆಕ್ರಮಣಶೀಲ ಮನಸ್ಸು ಸ್ತ್ರೀಯನ್ನು ತನಗೆ ಬೇಕಾದ ಸ್ವರೂಪಕ್ಕೆ ಬೇಕಾದಂತೆ ಪರಿವರ್ತಿಸಿದ್ದು.
* ಮಹಿಳೆಯನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡು ತಾನೇ ಸೃಷ್ಟಿಸಿದ ಹೆಣ್ಣನ್ನು ತಾನೇ ಮದುವೆಯಾಗಿದ್ದು. ಸೃಷ್ಟಿಕರ್ತ ಗಂಡು ತಂದೆಯಂತೆ ಗಂಡನೂ ಆಗಬಹುದು.
* ಶಕ್ತಿ ನೆರವೇರಿಸುತ್ತಿದ್ದ ಮೂರು ಕೆಲಸ ಸೃಷ್ಟಿ, ಸ್ಥಿತಿ ಮತ್ತು ಲಯಗಳನ್ನು ಪುರುಷ ದೇವತೆಗಳು ತಮ್ಮ ತಮ್ಮಲ್ಲಿ ಹಂಚಿಕೊಂಡಿದ್ದು.
* ಶೈವ ಮತ್ತು ವೈದಿಕ ಸಂಯೋಗವಿದೆ. ಜಗತ್ತಿನ ಸರ್ವಕಾರ್ಯಗಳಲ್ಲಿ ಶಿವ ಮತ್ತು ವಿಷ್ಣುವಿಗೆ ಪ್ರಾಮುಖ್ಯತೆ ನೀಡಲಾಗಿದೆ.

ಮಾತೃಮೂಲದ ಕುಟುಂಬಗಳು ಪಿತೃಮೂಲಕ್ಕೆ ಸ್ಥಿತ್ಯಂತರಗೊಳ್ಳುವಲ್ಲಿ ನಡೆದ ಸಂಘರ್ಷದ ಕತೆಯಾಗಿ 'ಶಕ್ತಿ ಕವಟ್ಲು' ಕಂಡುಬರುತ್ತದೆ. ಶಕ್ತಿ ಎಂದರೆ ಬಿಟ್ಟ ಕಣ್ಣು, ದಿಟ್ಟ ಭುಜ, ತೆರೆದ ನಾಲಿಗೆ, ಕೈಯಲ್ಲಿ ಆಯುಧ ಮತ್ತು ಹೋರಾಟಕ್ಕೆ ಹೊರಡಲು ಸಿದ್ಧತೆಯಲ್ಲಿರುವ ಮೂರ್ತಿಯ ರೂಪವನ್ನು ಇಂದಿಗೂ ಕಾಣುತ್ತೇವೆ. ಆದರೆ ಸರಸ್ವತಿ, ಲಕ್ಷ್ಮೀ ಮತ್ತು ಪಾರ್ವತಿ ಮೂರ್ತಿಗಳನ್ನು ಕಂಡಾಗ ಅವು ಸೌಮ್ಯತೆಯಿಂದ ಕೂಡಿದ್ದು, ಪೋಷಣೆ, ಲಾಲನೆ, ಸಂಗೋಪನೆಯ ಮಾದರಿಗಳಾಗಿವೆ. ತಲೆಬಾಗಿ, ಗಂಡನ ಸಾಧನೆಯಲ್ಲಿ ಸಹಕರಿಸುವ ಅಧೀನ ಸ್ಥಾನದಲ್ಲಿರುವುದು ಕಾಣುತ್ತದೆ. ಪತಿಯಿಲ್ಲದ ಸ್ವತಂತ್ರ ವ್ಯಕ್ತಿತ್ವದ ಶಕ್ತಿಯು ಯಾರಿಗೂ ಅಧೀನವಲ್ಲ. ಯಾರ ರಕ್ಷಣೆಯೂ ಅವಳಿಗೆ ಬೇಕಾಗಿಲ್ಲ. ಸ್ವಯಂ ತನ್ನನ್ನು ತಾನೇ ನೋಡಿಕೊಂಡು ಹೋಗುವ ಎಲ್ಲ ಸಾಮರ್ಥ್ಯಗಳನ್ನು ಹೊಂದಿರುವ ಹೆಣ್ಣು. ಇಂತಹ ಹೆಣ್ಣನ್ನು ಪಿತೃಪ್ರಧಾನತೆ ತನ್ನ ಅಧೀನತೆಗೆ ತೆಗೆದುಕೊಂಡ ಅನಂತರ ಬದಲಾದ ಸ್ವರೂಪದಲ್ಲಿ ಹೆಣ್ಣನ್ನು ರೂಪಿಸಿರುವುದನ್ನು ಲಕ್ಷ್ಮೀ, ಪಾರ್ವತಿ ಮತ್ತು ಸರಸ್ವತಿಯರಲ್ಲಿ ಕಾಣುತ್ತೇವೆ. ಪಿತೃಪ್ರಧಾನತೆಯ ಮುಖ್ಯ ಲಕ್ಷಣಗಳಲ್ಲಿ ವಂಶಸ್ಥಾಪನೆಯ ಆಶಯ ಪ್ರಮುಖವಾದುದು.

* ಮಂಟೇಸ್ವಾಮಿ ಭೂಮಿ ಮತ್ತು ಆಕಾಶದ ಸೃಷ್ಟಿಕರ್ತರು.
* ಭೂಮಿಯಲ್ಲಿ ವೈವಿಧ್ಯತೆಯನ್ನು ತುಂಬಲು ತನ್ನ ಅಂಗೈನ ಮೇಲೆ ಒಬ್ಬ ಆದಿಶಕ್ತಿಯನ್ನು ಸೃಷ್ಟಿಸಿದರು.
* ಆದಿಶಕ್ತಿ ತನ್ನ ಸೃಷ್ಟಿಸಿದವರನ್ನು ಧರೆಗೆ ದೊಡ್ಡವರು ಎಂದು ನಾಮಕರಣ ಮಾಡಿದಳು. ದೊಡ್ಡವರ ಕಾಲಿಗೆ ನಮಸ್ಕರಿಸಿ ತನಗೆ ಪತಿಯ ಭಾಗ್ಯವನ್ನು ಕೇಳಿದಳು. ಆದಿಶಕ್ತಿಯ ಮಾತಿನಿಂದ ತಾನು ಗತಿಗೆಟ್ಟೆ, ನಿನ್ನ ಬಾಯಲ್ಲಿ ಈ ವಾರ್ತೆ ಕೇಳಿ ಅನೇಕ ಕರ್ಮ ಬಂದವೆಂದು ಹೇಳಿ, ನಿನಗೆ ಮೂರು ಮಕ್ಕಳನ್ನು ಕೊಡ್ತೀನಿ. ಅವರಿಗೆ ನೀನು ಮಡದಿಯಾಗೆಂದು ಹೇಳಿ ಕೆಟ್ಟ ಸ್ತ್ರೀಯನ್ನು ಕಣ್ಣಿಂದ ನೋಡ ಬಾರದೆಂದು ಹೇಳಿ ಆದಿಶಕ್ತಿಯಿಂದ ದೂರ ಹೋಗುತ್ತಾರೆ.
* ಆದಿಶಕ್ತಿಯ ಹೊಟ್ಟೆಯಲ್ಲಿ ಮೊದಲಿಗೆ ಈಶ್ವರ ಮಲ್ಲಯ್ಯ ಹುಟ್ಟುತ್ತಾನೆ. ಗುರು ಹೇಳಿದಂತೆ ಪತಿಯಾಗುವಂತೆ ಈಶ್ವರನನ್ನು ಕೇಳುತ್ತಾಳೆ. ನನ್ನ ಬೆನ್ನಿಂದೆ ಇನ್ನೊಬ್ಬ ಬರುತ್ತಾನೆ ಅವನನ್ನು ಮದುವೆಯಾಗೆಂದು ಮುಂದಕ್ಕೆ ಹೊರಡುತ್ತಾನೆ.
* ಎರಡನೆಯವನಾಗಿ ಬ್ರಹ್ಮ ಹುಟ್ಟುತ್ತಾನೆ. ಆತನು ಕಟ್ಟ ಕಡೆಯಲ್ಲಿ ನಿಮ್ಮನ್ನು ಸಂತೋಷಗೊಳಿಸುವ ಮಗ ಬರುವನೆಂದು ತಿಳಿಸಿ ಮುಂದೆ ಹೋಗುತ್ತಾನೆ.
* ಆದಿಶಕ್ತಿಯ ಮೂರನೆ ಮಗನಾಗಿ ವಿಷ್ಣು ಹುಟ್ಟುತ್ತಾನೆ. ಆತನನ್ನು ತನ್ನ ಪತಿಯಾಗುವಂತೆ ಕೇಳಿದಳು. ವಿಷ್ಣು ಆದಿಶಕ್ತಿಯ ಕೈಯಲ್ಲಿ ಉರಿಹಸ್ತ ಇರುವುದು ಕಂಡು, ಅವಳ ಕೈಯ್ಯಾರವೇ ಅವಳ ಪ್ರಾಣ ತೆಗೆದುಬಿಡಲು ಯೋಚಿಸಿ ನಾನು ಮಾಡಿದಂತೆ ನಾಟ್ಯ ತಪ್ಪು ಇಲ್ಲದೆ ಮಾಡಿದರೆ ನಿನಗೆ ಪತಿ ಆಗುತ್ತೀನಿ ಎನ್ನುವನು.
* ನಾಟ್ಯ ಮಾಡಿ ಮಾಡಿ ಆಯಾಸ ಬಂದಂಥಾ ಸಮಯದಲ್ಲಿ ತನ್ನ ಎರಡು ಕೈ ತೆಗೆದು ತಲೆಗೆ ಇಟ್ಟುಕೊಂಡನು. ಆದಿಶಕ್ತಿಯು ತನ್ನ ಉರಿಹಸ್ತ ತೆಗೆದುಕೊಂಡು ತನ್ನ ತಲೆ ಮೇಲೆ ಇಟ್ಟುಕೊಂಡ ತಕ್ಷಣ ಧಗಧಗ ಉರಿದು ಬೂದಿಯಾದಳು. ಸುಟ್ಟು ಬೇಯುವ ತಾಯಿಯನ್ನು ಕಣ್ಣಾರೆ ಕಂಡರು.
* ಮೂರು ಜನ ಗುರುವಿನ ಬಳಿ ಓಡಲು ಗುರು ಎಲ್ಲಿ ಸುಟ್ಟು ಹಾಕಿದ್ದೀರಿ ಎಂದು ಬೂದಿ ಇರುವ ಜಾಗಕ್ಕೆ ಬಂದು, ಬೂದಿಯಿಂದ ಮೂರು ಹೆಣ್ಣು ಮಕ್ಕಳನ್ನು ಸೃಷ್ಟಿಸಿ ಇವರನ್ನು ಮದುವೆಯಾಗಿ ಜಗತ್ತನ್ನು ಬೆಳೆಸಿ ಎಂದರು.
* ಪಾರ್ವತಿ, ವಿಧಿಯಮ್ಮ ಮತ್ತು ಲಕ್ಷ್ಮೀ ಮೂವರನ್ನು ಮೂರು ಜನರಿಗೆ ಮಡದಿಯರನ್ನಾಗಿಸುತ್ತಾರೆ.

ಗುರುವು ಅವರನ್ನು ದೇವಲೋಕಕ್ಕೆ ಕರೆದುಕೊಂಡು ಹೋಗಿ "ನನ್ನ ಕಂಡುಗ ಜ್ಞಾನದ ಬುಕ್ಕ ಕಣ್ಣಿಂದಾ ನೋಡಿರಪ್ಪ, ನನ್ನ ಕಾಲುಗ ಜ್ಞಾನದ ಬುಕ್ಕ ನೀವು ಕಾಲವಾಗಿ ನೋಡಿರಪ್ಪ, ನನ್ನ ಕಾಲದ ಜ್ಞಾನವ ನೀವು ಓದಿರಪ್ಪ ಎಂದು ಮೂರು ಜನರಿಗೂ ವಿದ್ಯೆ ಬುದ್ಧಿ ಕಲಿಸಿ ಭೂಲೋಕಕ್ಕೆ ವಿದ್ಯೆ ಬುದ್ಧಿ ಕಲಿಸಬೇಕು ಅಂತ ಹೇಳಿದರು.

ವಿಧಿಯಮ್ಮ ಗೊಂಬೆ ಮಾಡಿ ಆಟವಾಡುವಾಗ ಬ್ರಹ್ಮ ಅದನ್ನು ತೆಗೆದು ಜೀವ ತುಂಬಿ ತನ್ನಂತೆ ಮಾಡಿಕೊಳ್ಳುತ್ತಾನೆ. ಅದನ್ನು ವಿಧಿಯಮ್ಮ ಜಗಳವಾಡಿ ತೆಗೆದುಕೊಂಡು ತನ್ನ ಸೆರಗಲ್ಲಿ ಬಚ್ಚಿಟ್ಟು

ಕೊಳ್ಳುತ್ತಾಳೆ. ದೊಡ್ಡವರಲ್ಲಿಗೆ ಜಗಳ ಹೋಗಿ ಅವರು ಮತ್ತೊಂದು ಗಂಡುಗೊಂಬೆಯನ್ನು ಸೃಷ್ಟಿಸಿ ಅದಕ್ಕೆ ಬ್ರಹ್ಮನಿಂದ ಜೀವ ತುಂಬಿಸಿ ಭೂಮಿಗೆ ಬಿಡುತ್ತಾರೆ.

ಈ ಮೇಲಿನ ವಿವರಗಳನ್ನು ಮಾದೇಶ್ವರ ಕಾವ್ಯದ 'ಶಕ್ತಿ ಕವಟ್ಲು' ನಲ್ಲಿ ಬರುವ ಜಗತ್ತಿನ ಸೃಷ್ಟಿಗೂ ಇಲ್ಲಿ ಬರುವ ಸೃಷ್ಟಿಯ ಕತೆಗೂ ಕೆಲವು ಮೂಲಭೂತ ವ್ಯತ್ಯಾಸಗಳಿವೆ. ಅಲ್ಲಿ ಶಿವನ ಪ್ರಾಮುಖ್ಯತೆ ಇದ್ದರೆ ಇಲ್ಲಿ ವಿಷ್ಣುವಿನ ಪ್ರಾಮುಖ್ಯತೆ ಇದೆ. ಪ್ರಕೃತಿ ಆರಾಧನೆ – ಮಾತೃ ಆರಾಧನೆಯಿಂದ – ಏಕದೇವೋಪಾಸನೆಯ ಕಡೆ ಜಾರುತ್ತಾ ಇಲ್ಲಿ ಪುರುಷಾರಾಧನೆ ನೆಲೆಯಲ್ಲಿ ಭೂಮಿಯ ಸೃಷ್ಟಿಕರ್ತ ಧರೆಗೆ ದೊಡ್ಡವರಾದ ಮಂಟೇಸ್ವಾಮಿ ಅವರ ಸೃಷ್ಟಿಯಾಗಿ ಆದಿಶಕ್ತಿ ಕಂಡು ಬರುತ್ತಾಳೆ. ಆದಿಶಕ್ತಿಯು ಧರೆಗೆ ದೊಡ್ಡವರನ್ನು ಪತಿಯನ್ನು ಕೊಡಲು ಕೇಳಿದಾಗ ಕೆಟ್ಟ ಸ್ತ್ರೀಯನ್ನು ಕಣ್ಣಿಂದ ನೋಡಬಾರದೆಂದು ಹೇಳಿ ನಿನ್ನ ಮಕ್ಕಳೆ ನಿನಗೆ ಪತಿಯಾಗುವರೆಂದು ಹರಿಸಿ ದೂರಸರಿಯುತ್ತಾರೆ. ಇಲ್ಲಿ ಅಂದಿಗಾಗಲೇ ಬ್ರಹ್ಮಚರ್ಯ ಅತ್ಯಂತ ಶ್ರೇಷ್ಠವೆಂದು ನಂಬಿದ ವೈದಿಕ ನೆಲೆಯ ಕುರುಹುಗಳು ಮತ್ತು ಲೈಂಗಿಕತೆಯನ್ನು 'ಕೆಟ್ಟದು', 'ವಿನಾಶಕಾರಿ' ಎಂದು ನೋಡುವ ಕ್ರಮವು ಕಾವ್ಯವನ್ನು ಪ್ರವೇಶಿಸಿರುವುದು ಪಿತೃ ಸಂಸ್ಕೃತಿ ಸಾಂಸ್ಥಿಕ ನೆಲೆಯನ್ನು ಪಡೆದಿರುವ ವಿಧಾನವನ್ನು ಕಾಣುತ್ತೇವೆ. ಸಾಂಸ್ಥಿಕ ನೆಲೆಯು ಸ್ತ್ರೀಯನ್ನು ಪುರುಷ ಅಧೀನವನ್ನಾಗಿ ನೋಡುವುದು.

ಮಾದೇಶ್ವರ ಕಾವ್ಯದಲ್ಲಿ ಗ್ರಾಮದೇವತೆಗಳ ಉಲ್ಲೇಖ ಬರುವುದಿಲ್ಲ. ಮಂಟೇಸ್ವಾಮಿಯ ನೆಲೆಗಳ ವಿಸ್ತೀರ್ಣಕ್ಕೆ ನೆರವಾಗುವವರು ಗ್ರಾಮದೇವತೆಯರು. ಇವರನ್ನು ಸೃಷ್ಟಿಸಿದವರು ಧರೆಗೆ ದೊಡ್ಡವರೆ. ಅವರು ಕಾಳಿ, ಕಂಕಾಳಿ, ಮಾಯಾ, ಮುದೂತಿ ಇಂತಹ ಮಾರೀಯರನ್ನು ತ್ರಿಮೂರ್ತಿಗಳ ಅಧೀನರನ್ನಾಗಿ ಮಾಡಿ ಅವರ ಸಹಾಯ ಪಡೆಯುವಂತೆ ಹೇಳುತ್ತಾರೆ. ಗ್ರಾಮದೇವತೆಗಳು ಕೃಷಿ ಜೀವನಕ್ರಮದೊಂದಿಗೆ ಬೆಸೆದುಕೊಂಡವರು, ಗ್ರಾಮಗಳ ಉಗಮಗಳೊಂದಿಗೆ ಗ್ರಾಮದೇವತೆಗಳೂ ಉಗಮಗೊಂಡು ಗ್ರಾಮರಕ್ಷಕಿಯರಾಗಿ ತಳವೂರಿದವರು. ಹೀಗಾಗಿ ಮಂಟೇಸ್ವಾಮಿ ಕೃಷಿಕೇಂದ್ರಗಳಾದ ಗ್ರಾಮಗಳಲ್ಲಿ ತನ್ನ ನೆಲೆಯನ್ನು ಸ್ಥಾಪಿಸುವುದಷ್ಟೇ ಅಲ್ಲ ಪಿತೃಸಂಸ್ಕೃತಿಯನ್ನು ಸ್ಥಿರೀಕರಣಗೊಳಿಸಿದ, ಗಂಡಿನ ಅಧೀನನೆಲೆಯಲ್ಲಿ ಹೆಣ್ಣನ್ನು ರೂಪಿಸಿದ ಧಾರ್ಮಿಕ ಪರಂಪರೆಯಾಗಿದೆ. ಇದನ್ನು ಹಲಗೂರು ಪಾಂಚಾಳರನ್ನು ಒಕ್ಕಲಾಗಿಸಿಕೊಳ್ಳುವ ಪ್ರಸಂಗದಿಂದ ನೋಡಬಹುದಾಗಿದೆ. ಬಸವಾಚಾರಿ ಮತ್ತು ಮುದ್ದಮ್ಮನ ಮಗ ಕೆಂಪಾಚಾರಿಯನ್ನು ದೊಡ್ಡಮ್ಮ ತಾಯಿಯ ಮೂಲಕ ಶಿಶುಮಗನನ್ನಾಗಿ ಪಡೆಯುವ ಧರೆಗೆ ದೊಡ್ಡವರು ಅವನನ್ನು ತನ್ನ ವಿಚಾರಗಳಿಗನುಸಾರವಾಗಿ ಪಳಗಿಸಿ ಅವನಿಗೆ ಸಿದ್ಧಪ್ಪಾಜಿ ಎಂದು ನಾಮಕರಣ ಮಾಡುತ್ತಾರೆ. ಸಿದ್ಧಪ್ಪಾಜಿಯು ಹಲಗೂರು ಪಾಂಚಾಳರಲ್ಲಿ ಕಬ್ಬಿಣ ಭಿಕ್ಷೆ ಪಡೆಯುವ ಸಂದರ್ಭದಲ್ಲಿ ಮಾರಿಯರನ್ನು ತನ್ನ ಕೈ ವಶಮಾಡಿಕೊಂಡು ಅವರ ಮೂಲಕವೇ ಕಬ್ಬಿಣ ಭಿಕ್ಷೆ ಪಡೆಯುವ ತಂತ್ರವನ್ನು ರೂಪಿಸುತ್ತಾರೆ. ಪಾಳ್ಯಗಾರರು ಒಡ್ಡುವ ಅನೇಕ ಪರೀಕ್ಷೆಗಳಿಗೆ ಒಳಗಾಗುತ್ತಾರೆ. ಇದರಿಂದ ಕಷ್ಟಕ್ಕೆ ಒಳಗಾದ ಸಿದ್ಧಪ್ಪಾಜಿ ದೊಡ್ಡಮ್ಮ ತಾಯಿಯನ್ನು ತನ್ನ ಸಹಾಯಕ್ಕೆ ಕರೆಯುತ್ತಾರೆ. ದೊಡ್ಡಮ್ಮ ತಾಯಿ ಧರೆಗೆ ದೊಡ್ಡವರನ್ನು ಕರೆಯುಲು ಅವರು ಬಂದು ತನ್ನ ಜೋಳಿಗೆಯೊಳಗಿಂದ ೭೦೦ ಮಾರಿಯರನ್ನು ಬಿಟ್ಟು ಪಾಂಚಾಳರ ಬೀದಿಗಳನ್ನು ನಾಶ ಮಾಡಲು ಕಳುಹಿಸುತ್ತಾರೆ.

ಏಳು ನೂರು ಮಾರೀರಾ ದೇವಾ
ಮುತ್ತಿನ ಜೋಳಿಗೆಯಿಂದ ಬುಟ್ರು
ಮಾ ಗುರು ಮಂಟೇದಲಿಂಗಪ್ಪ
ಹಲಗೂರು ಏಳುಬೀದಿ
ಚಿಲುಪುರ ಏಳುಬೀದಿ
ಏಳೇಳು ಬೀದಿ ಒಳಗೆ
ಕೇಳಿ ನನ್ನ ಕಂದಾ
ಅಮ್ಮ ಹದುನಾಕು ಬೀದಿ
ಜನಗಳ ನನ್ನ ಕಂದಾ

ನಿನಗೆ ಹಾರವಾಗಿ ಕೊಡುತೀನಿ
ಇವರು ಏಳುಜನ ಕಂದಾ
ಪಾಳ್ಳೆಗಾರ್ರ ಕಂದ
ಬುಟ್ಟು ಬುಡಿ ನನ ಕಂದಾ
ಏಳುಮಂದಿ ಕಂದಾ
ದೊರೆಗಳ ಕಂದಾ
ತಂಟೆಗೆ ಹೋಗಬೇಡಿ
ಈ ಹದಿನಾಲಕು ಗ್ರಾಮ ಬೀದಿ
ಒಂದನುವೆ ಬುಡಬ್ಯಾಡಿ ||ಸಿದ್ಧಯ್ಯ||
ಹಲಗೂರು ಪಂಚಾಳಗೇರಿ
ಎಂದರೆ ನನ್ನ ಕಂದಾ
ಇದ ಹಾಳುಮಾಡುವ ಗಂಟ
ನೀವು ಬುಡನೆ ಬ್ಯಾಡಿ ಕಣ್ರವ್ವ
ಹಲಗೂರು ಪಟ್ಟಣ
ಹಾಳು ಮಾಡನೆ ಬೇಕು
ಗಾಳಿಗೆತ್ತಿ ತೂರಬೇಕು
ಇವರಿಗೆ ಬೇಕು ಬೇಕಾದ ಕಷ್ಟ ನೀವು
ಕೊಟ್ಟು ಬುಡ್ರಮ್ಮ ಎಂದರಲ್ಲ ||ಸಿದ್ಧಯ್ಯ||
ಅಕ್ಕಪಕ್ಕದ ಊರಿಗೆ ಮಾತ್ರ ದೃಷ್ಠಿ ಮಡಗಿ ನೋಡುಬ್ಯಾಡಿ
ಅಕ್ಕಪಕ್ಕದ ಊರಿಗೇನಾದ್ರು ಹೊರಟೋಗಿ ಬುಟ್ರೆ ಕಂದಾ
ನೀವು ಒಕ್ಕೊಕ್ಕಿದ ಮೂಲೆಗೆ
ನಾ ಹೊಗೆಯಾಕ್ತೀನಿ ಎಂದಾರಲ್ಲಾ ||ಸಿದ್ಧಯ್ಯ||
ಈ ಹಲಗೂರು ಏಳು ಬೀದಿಯ ನೀವು
ಕಂಡುತ ಬಿಡಲೆ ಬ್ಯಾಡಿ
ನಿಮ್ಮ ಏಳುನೂರು ಮಾರಿರಿಗೆ ಕಂದಾ
ದೊಡ್ಡಬ್ಬ ಆಯ್ತುದೆ
ನಿಮಗೆ ಚಿಕ್ಕಬ್ಬ ಆಯ್ತುದೆ
ನಿಮಗೆ ಮರಬ್ಬ ಆಯ್ತುದೆ
ಈ ಪಂಚಾಳದ ಕೇರಿಗೆ ನೀವು ಒಂಟೋಗಿರವ್ವ ಎಂದಾರಲ್ಲಾ ||ಸಿದ್ಧಯ್ಯ||
ಅನ್ನ ಇಲ್ಲದಿದ್ದ ಮಾರೀರು
ನಿದ್ರೆ ಇಲ್ಲದಿದ್ದ ಮಾರೀರು
ಕಣ್ಣು ಕಾಣದ ಮಾರೀರು ಗುರುವೆ
ಕಿವಿ ಕೇಳದಿದ್ದ ಮಾರೀರು
ಅಯ್ಯಾ ಎಲ್ಲಾ ಮಾರೀರು ಗುರುವೆ
ಹಲಗೂರಿಗೆ ನುಗ್ಗುತಾರೆ ||ಸಿದ್ಧಯ್ಯ||
ಅಯ್ಯಾ ಮಾರಿನುಗ್ಗಿದ ಮನೆ ಒಳುಗೆ
ಇಲಿ ಹೆಗ್ಗಣ ಸಾಯುತಾವೆ ||ಗಂಗಾಧರ||
ಅಯ್ಯಾ ಇಲಿ ಹೆಗ್ಗಣ ಸತ್ತಂಗೆ
ಸಾಲು ಹೆಣವ ಕೆಡವುತಾರೆ ||ಗಂಗಾಧರ||
ಗುರುವೆ ದೊಡ್ಡ ದೊಡ್ಡವರಿಗೆಲ್ಲ

ಹಿಂದೆ ಬೇದಿಯ ಕೊಟ್ಟವರೆ
ಮುಂದು ಬೇದಿಕೊಟ್ಟವರೆ
ಒಂದು ವಮನದಲ್ಲಿ
ಒಂದೆ ಬೇದಿ ಒಳಗೆ
ಅವರು ಪಕ ಪಕನೆ ಗುರುದೇವಾ
ಪ್ರಾಣವನ್ನೆ ಬಿಡುವುತಾರೆ ॥ಸಿದ್ಧಯ್ಯ॥
ಗುರುವೆ ಮುದುಕಿರು ಮೋಟೀರು
ಎಡಾಯಸದೋರು ಗುರುವು
ಹೆಂಗಸರಿಗೆ ನನ್ನಪ್ಪ
ಕಂಕುಳು ಒಳಗೆ ದೇವಾ
ಶಂಕುದಾಳಿ ಕೊಟ್ಟು
ಗುರುವೆ ಒಂದು ಮೂಡಿಸವರೆ
ದೇವಾ ಒಂಭತ್ತು ಹೊಡಿಸವರೆ
ಗುರುವೆ ಶಂಕುನ ಬಾದೆ ದೇವಾ
ತಡಿನಾರುದೆ ದೇವಾ
ಅವರು ಕೊರಗಿ ಕೊರಗಿ
ಪಕ್ಕನೆ ಪ್ರಾಣ ಬಿಡುವುತಾರೆ ॥ಸಿದ್ಧಯ್ಯ॥
ಅವರು ಹಾಲು ಕುಡಿವ ಮಕ್ಕಳಿಗೆ
ರಕುತ ಬೇದಿ ಕೊಟ್ಟರಲ್ಲ ॥ಸಿದ್ಧಯ್ಯ॥
ಅವರು ಬೀದಿಲಾಡೊ ಮಕ್ಕಳಿಗೆ
ಹುಣ್ಣು ರೋಗ ಕೊಟ್ಟರಲ್ಲ ॥ಸಿದ್ಧಯ್ಯ॥
ಅವರು ಹಾದಿಲಾಡೋ ಮಕ್ಕಳಿಗೆ
ಗ್ವಾರು ರೋಗ ಕೊಟ್ಟರಲ್ಲಾ ॥ಸಿದ್ಧಯ್ಯ॥
ಅವು ಲಾಲಿಲಾಡೋ ಮಕ್ಕಳು
ಲಾಲಿ ಒಳಗೆ ಸಾಯುತಾವೆ ॥ಸಿದ್ಧಯ್ಯ॥
ಲಾಲಿ ಒಳಗೆ ಆಡುವಂತ ಮಕ್ಕಳು
ಹಲಗೂರಲ್ಲಿ ಸಾಯುವಂತ ಕಾಲದಲ್ಲಿ ಗುರುವು
ಧರೆಗೆ ದೊಡ್ಡವರು ಮಂಟೇದಾ ಲಿಂಗಪ್ಪ
ಹಲಗೂರು ಪಂಚಾಳಗೇರಿಗೆ ಗುರುವು
ಮಾರೀ ಕೂಡುಬುಟ್ಟು ಗುರುದೇವಾ
ಹಲಗೂರು ಹಾಳಾಗಲಿ ಎನುತೇಳಿ ಎತ್ತಿ ಶಾಪ ಕೊಟ್ಟುಬುಟ್ಟು
ಹಲಗೂರು ಬುಟ್ಟುಬುಟ್ಟು ದೇವಾ
ರಾಜ ಬೊಪ್ಪಗೌಡ್ನಪುರಕೆ ದೇವಾ
ಜಗತ್ತು ಗುರು ಧರೆಗೆ ದೊಡ್ಡವರು
ಹೊರಟೋದ ಕಾಲದಲ್ಲಿ
ಹಲಗೂರು ಪಂಚಾಳಗೇರಿ ಒಳಗೆ
ಮಾರೀರ ಆಟ ಪಾಠ
ಆಡುವಂತ ಕಾಲದಲ್ಲಿ ಗುರುವು
ಅಯ್ಯಾ ಹಾದಿಬೀದಿ ಒಳಗೆ
ಹೆಣವೆ ಇಟ್ಟಾಡುತಾವೆ ॥ಸಿದ್ಧಯ್ಯ॥ [ಪುಟ: ೭೮೮–೭೯೧ ಮಂಟೇಸ್ವಾಮಿ]

ಜನರನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಧರೆಗೆ ದೊಡ್ಡವರು ಬಳಸುವ ಹಿಂಸೆ ಪಿತೃಪ್ರಧಾನತೆಯ ಬಹುಮುಖ್ಯ ಲಕ್ಷಣವಾಗಿದೆ. ಭಯ ಹುಟ್ಟಿಸುವ ಈ ತಂತ್ರ ಅಬಲರನ್ನಾಗಿಸುವ ಕ್ರಮವಾಗಿದೆ. ಸ್ತ್ರೀಯರನ್ನು ಹಿಂಸೆಗೆ ಪ್ರಚೋದಿಸುವುದಲ್ಲದೆ, ಹಿಂಸೆಯಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಮಾರಿ, ಮಸಣಿಯರನ್ನು ಸ್ಥಳೀಯರು ತಿರಸ್ಕರಿಸುವಂತೆ ಮಾಡುವುದನ್ನು ಕಾಣುತ್ತೇವೆ. ಗ್ರಾಮದೇವತೆಯರನ್ನು ತಿರಸ್ಕರಿಸಿ ಮಂಟೇಸ್ವಾಮಿಯನ್ನು ಒಪ್ಪಿಕೊಳ್ಳುವ ಮೂಲಕ ಆತನ ಒಕ್ಕಲಾಗುವುದು ಎಂದರೆ ಧಾರ್ಮಿಕ ಸ್ಥಿತ್ಯಂತರವೇ ಆಗಿದೆ. ಗ್ರಾಮದೇವತೆಯರನ್ನು ತನ್ನ ಅಧೀನವಾಗಿಸಿಕೊಂಡ ಧರೆಗೆ ದೊಡ್ಡವರು ತಾನೇ ಶ್ರೇಷ್ಠವೆಂದು ಭಾವಿಸಿದವರು ಆಗಿದ್ದಾರೆ. ಇಂತಹ ಆತ್ಮಸ್ಥೈರ್ಯ ಇರುವ ಧರೆಗೆ ದೊಡ್ಡವರೆಂದು ಘೋಷಿಸಿಕೊಂಡ ಮಂಟೇಸ್ವಾಮಿ ಅವರು ತನ್ನನ್ನು ತಾನು ಸ್ಥಾಪಿಸಿಕೊಳ್ಳುವುದನ್ನು ಕಾಣುತ್ತೇವೆ.

"ಭೂಮಿ, ಭೂಲೋಕ, ಕಲ್ಯಾಣ, ಕೈಲಾಸ
ಈ ನಡುವೆ ನರಲೋಕಕ್ಕೆ
ಮಗನಾಗಿರ್ತಕ್ಕಂತ
ಈ ನರಲೋಕಕ್ಕೆ ಗಂಡನಾಗಿರ್ತಕ್ಕಂತ
ಗಂಡು ದೇವರು ನಾನು" [ಪುಟ: ೩೮೮, ಮಂಟೇಸ್ವಾಮಿ ಮಹಾಕಾವ್ಯ]

ನರಲೋಕ ಗಂಡನಾಗಿ ಸ್ಥಾಪಿತವಾಗಿ ಪಿತೃಪ್ರಧಾನ ನೆಲೆಯನ್ನು ಸ್ಥಿರೀಕರಣಗೊಳಿಸುವ ಮಂಟೇಸ್ವಾಮಿ ನಿಜವಾದ ಪಿತೃಪ್ರತಿನಿಧಿಯಾಗಿ ಸ್ತ್ರೀ ನೆಲೆಗಳನ್ನು ಶಾಶ್ವತವಾಗಿ ಪಿತೃನೆಲೆಗಳಾಗಿಸುತ್ತಾರೆ. ಇದನ್ನು ಪ್ರೀತಿಯಿಂದ ಮಾಡದೆ ದಬ್ಬಾಳಿಕೆ,ದೌರ್ಜನ್ಯಗಳ ಮೂಲಕ ಸ್ಥಾಪಿಸುತ್ತಾರೆ. ಪಿತೃಪ್ರಧಾನತೆಯ ಈ ಲಕ್ಷಣವೇ ಸಮಾನತೆಗೆ ಅಡ್ಡಿಯಾಗಿದೆ. ತಾನೇ ಶ್ರೇಷ್ಠ ಎಂದರೆ ಉಳಿದುದೆಲ್ಲಾ ಅಧೀನವಾಗುತ್ತದೆ. ಪುರುಷ ಕೇಂದ್ರಿತ ಈ ನೆಲೆಯಲ್ಲಿ ಸ್ತ್ರೀ ಅಧೀನವಾಗುವುದಲ್ಲದೆ ದುಡಿಯುವ ವರ್ಗ ಮತ್ತು ಬಡವರು ಅಧೀನರಾಗುವುದು ಅಸಮಾನ ಸಮಾಜವನ್ನು ಯಥಾವತ್ತಾಗಿ ಮುಂದುವರೆಸುವುದು ಕಾಣುತ್ತೇವೆ. ಇಲ್ಲಿ ಒಂದು ಧಾರ್ಮಿಕ ನೆಲೆಯಿಂದ ಮತ್ತೊಂದು ಧಾರ್ಮಿಕತೆಗೆ ಜನಸಾಮಾನ್ಯರ ಸ್ಥಿತ್ಯಂತರವಷ್ಟೇ ನಡೆದಿರುವುದು;ಯಾವುದೇ ಸಾಮಾಜಿಕ, ಆರ್ಥಿಕತೆಯಲ್ಲಿ ಇಂತಹ ಬದಲಾವಣೆಗಳನ್ನು ಕಾವ್ಯ ಮಾತನಾಡುವುದಿಲ್ಲ. ಸಾಮಾಜಿಕ, ಆರ್ಥಿಕ ಅಸಮಾನತೆಗಳು ಉಂಟುಮಾಡುವ ಅನ್ಯಾಯವನ್ನು ಗುರುತಿಸುವುದಿಲ್ಲ. ಪಿತೃಪ್ರಧಾನತೆಯ ಯಾಜಮಾನ್ಯ ಸಂಸ್ಕೃತಿಯ ಸ್ಥಿರೀಕರಣ ಪ್ರಧಾನವಾಗಿದ್ದು ಮಹಿಳೆ ಇದರ ಭಾಗವಾಗುತ್ತಾ ಹೋಗುವವಳು ಮಾತ್ರ. ಇದಕ್ಕಾಗಿ ಪಾತಿವ್ರತ್ಯವನ್ನು ತಳಸಮುದಾಯಗಳಲ್ಲಿ ಖಾಯಂಗೊಳಿಸಿದಂತೆ ಕಾಣುತ್ತೇವೆ. ಮಲೆ ಮಾದೇಶ್ವರ ಕಾವ್ಯದಲ್ಲಿನ 'ಸಂಕಮ್ಮ' ಪ್ರಸಂಗ ಇದಕ್ಕೆ ಸಾಕ್ಷಿ. ಬುಡಕಟ್ಟುಗಳಲ್ಲಿ ಮದುವೆಯ ಅನಂತರದಲ್ಲಿ ಗಂಡ-ಹೆಂಡತಿ ಪ್ರತ್ಯೇಕವಾಗಿ ವಾಸಿಸುವುದು ವಾಡಿಕೆ. ಹಾಗೆ ಪ್ರತ್ಯೇಕವಾಗಿ ವಾಸಿಸಲು ನೀಲಯ್ಯ ಮತ್ತು ಸಂಕಮ್ಮ ಪ್ರಾರಂಭಿಸುತ್ತಾರೆ. ಸ್ವಲ್ಪ ದಿನಗಳಲ್ಲೇ ಒಂಭತ್ತು ತಿಂಗಳಕಾಲ ಆಹಾರ ಸಂಗ್ರಹಣೆ ಮತ್ತು ಬೇಟೆಗೆ ಸಮುದಾಯದೊಂದಿಗೆ ಹೋಗುವ ಪಾಳಿ ಬಂದಾಗ ತನ್ನ ಹೆಂಡತಿ ಒಬ್ಬಳನ್ನೇ ಬಿಟ್ಟು ಹೋಗಲು ಅನುಮಾನಿಸುವ ನೀಲಯ್ಯ ತನ್ನ ಹೆಂಡತಿಗೆ ಕೈಭಾಷೆ ಕೊಡುವಂತೆ ಕೇಳುತ್ತಾನೆ. ಕೈಭಾಷೆ ಕೊಡಲು ಒಪ್ಪದ ಸಂಕಮ್ಮನಿಗೆ ನೀಲಯ್ಯ ಕೊಡಬಾರದ ಹಿಂಸೆಯನ್ನು ನೀಡುವನು. ಅವಳ ಲೈಂಗಿಕ ಸ್ವಾಯತ್ತತೆಯನ್ನು ನಿಯಂತ್ರಿಸಲು ಅವಳ ಮೇಲೆ ಹಿಂಸೆಗಳನ್ನು ಪ್ರಯೋಗಿಸುವನು.

ಅಯ್ಯಾ ಕಣ್ಣಿಗೆ ಸೂಜಿಹಾಕವನೆ
ಕರ್ಣಕೆ ದಬ್ಬುವ ಬಡದವನೆ
ಕಣ್ಣಿಗೆ ಸೂಜಿ ಹಾಕವನೆ
ಬಾಯಿಗೆ ಬೀಗ ಹಾಕವನೆ
ಹಿಂಕೈ ಮುರಿಯ ಕಟ್ಟವನೆ
ಕಾಲಿಗೆ ಸಂಕೋಲೆ ಹಾಕವನೆ
ಮಲೆಯ ಸ್ವಾಲುಗ ನೀಲಯ್ಯ

ಅಯ್ಯಾ ಮುದುರಿ ಮೂಟೆ ಕಟ್ಟವ್ನೆ
ಮೊಕ್ಕಣ್ಣಾಗಿ ಕೆಡುಗವನೇ ॥ಕೋರಣ್ಯ॥
ಮುದುರಿ ಮೂಟೆಯ ಕಟ್ಟಿ ಶಿವಶರಣೆಯಾದ ಸಂಕಮ್ಮನಾ
ಮೊಕ್ಕಣ್ಣಾಗಿ ಮಲಗಿಸ್ಬುಟ್ಟು
ಎತ್ತುಬಾರದ ಗುಂಡ ತಂದು ಬೆನ್ನಮೇಲೆ ಮಡಗ್ದ
ಎಡಾಮಗ್ಗಲಾಗಿ ಬಲಮಗ್ಗಲಾಗಿ
ನನ್ನ ಮಡದಿ ಹೊಳ್ಳಿಬಿಡುತ್ತಾಳೆ ಅಂಥೇಳಿ
ಅಯ್ಯಾ ನಗ್ಗಾಲು ಮುಳ್ಳಾ ತಂದವನೆ
ಮಗ್ಗಾಲು ಹಾಸಿಗೆ ಮಾಡವನೆ
ಬೆಲ್ಲದ ಹಾಸಿಗೆ ಮಾಡವನೆ
ಮೈಮೇಲಾದರೆ ಚೆಲ್ಲವನೆ
ಅಯ್ಯಾ ಮಾಡಬಾರ್ದ ಕೊಲೆಯ ಮಾಡವನೆ
ಮಲೆಯ ಸ್ವಾಲುಗ ನೀಲಯ್ಯ ॥ಕೋರಣ್ಯ॥ [ಪುಟ: ೧೭೩ ಮಲೆಮಾದೇಶ್ವರ ಕಾವ್ಯ]

ಹೀಗೆ ವಿವಿಧ ರೀತಿಯ ಹಿಂಸೆಗಳನ್ನು ಕೊಡುವ ನೀಲಯ್ಯ ಸಂಕಮ್ಮನ ಹೆಣ್ಣುತನಕ್ಕೆ ಸವಾಲು ಹಾಕುತ್ತಾನೆ. ಸಂಕಮ್ಮ ತೆರ ಹಿಂತಿರುಗಿ ಪಡೆದು ತನ್ನನ್ನು ಬಿಡಲು ಹೇಳುತ್ತಾಳೆ. ಇಲ್ಲಿ ಬುಡಕಟ್ಟುಗಳ ನಿಯಮ ಮೀರಿ ನೀಲಯ್ಯ ವರ್ತಿಸುವುದನ್ನು ಕಾವ್ಯದಲ್ಲಿ ಕಾಣುತ್ತೇವೆ. ಇಂದಿಗೂ ಪಾತಿವ್ರತ್ಯ ಸೊಂಕಿಲ್ಲದ ಸೋಲಿಗರಲ್ಲಿ ಈ ಕಾವ್ಯ ಉಂಟುಮಾಡುವ ಚಲನೆ ಯಾವ ರೀತಿಯದೆಂದು ವಿಶ್ಲೇಷಿಸಬೇಕಾಗಿದೆ. ಪಿತೃಪ್ರಧಾನ ವ್ಯವಸ್ಥೆಯ ಕಟ್ಟುಪಾಡುಗಳಿಗೆ ಸೋಲಿಗರು ಒಳಗಾಗುತ್ತಿರುವ ಸಾಮಾಜಿಕ ಚಲನೆಯಾಗಿಯೂ ಇದನ್ನು ನೋಡಬೇಕಾಗಿದೆ.

ಪಿತೃಪ್ರಧಾನತೆಯಲ್ಲಿ ಹೆಣ್ಣನ್ನು ಆಸ್ತಿಯನ್ನಾಗಿ ನೋಡಲಾಗಿದೆ. ನೀಲಯ್ಯನ ಮಕ್ಕಳಿಗೆ ತಾಯಿಯಾಗುವ ಮೂಲಕ ಆತನ ವಂಶ ಮುಂದುವರೆಸಬೇಕಾಗಿದೆ. ಲೈಂಗಿಕ ಸ್ವಾಯತ್ತತೆಯನ್ನು ಹೊಂದಿರುವ ಬುಡಕಟ್ಟು ಸಮಾಜದ ಸ್ಥಿತ್ಯಂತರದ ನೆಲೆಯಾಗಿ ನೀಲಯ್ಯ ಅದರ ಪ್ರತಿನಿಧಿಯಾಗುತ್ತಾನೆ. ಸಂಕಮ್ಮ ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳುತ್ತಾಳೆ. ಮಾದೇಶ್ವರನ ಅನುಗ್ರಹದಿಂದ ಬಸುರಿ ಆಗುತ್ತಾಳೆ. ನೀಲಯ್ಯನ ಹಲವು ಪರೀಕ್ಷೆಗಳಿಗೆ ಒಳಗಾಗುತ್ತಾಳೆ. ಇಂತಹ ಸಂಘರ್ಷವನ್ನು ಕಾವ್ಯ ದೀರ್ಘವಾಗಿ ನಿರೂಪಿಸುತ್ತದೆ. ಸಾಮಾಜಿಕ, ಧಾರ್ಮಿಕ ಪರಿವರ್ತನೆಗಳ ದಾಖಲಾಗಿ ಈ ಎರಡು ಕಾವ್ಯಗಳು ಮಹತ್ವವನ್ನು ಪಡೆಯುತ್ತವೆ. ಒಪ್ಪಿ ನಡೆಯುವ ಮಹಿಳೆಯರು ಉಳಿಯುತ್ತಾರೆ. ಒಕ್ಕಲಾಗಲು ಒಪ್ಪದವರು ನಿರ್ನಾಮವಾಗುತ್ತಾರೆ. ಇದನ್ನು ಕಾಳಮ್ಮನ ಪ್ರಸಂಗ ತಿಳಿಸುತ್ತದೆ. ಹೀಗೆ ಎರಡು ಕಾವ್ಯಗಳ ಸಂದರ್ಭಗಳಲ್ಲೂ ಗ್ರಾಮದೇವತೆಗಳ ಪಲ್ಲಟ, ಮಹಿಳೆಯರು ಆಯಾ ಪ್ರಾದೇಶಿಕ ನಿಯಮಗಳನ್ನು ಮೀರುವ ಹೊಸವ್ಯವಸ್ಥೆಯೊಳಗೆ ಶಾಮೀಲಾಗುವ ಮೂಲಕ ಸ್ಥಾಪಿತರಾಗುವುದನ್ನು ಕಾಣುತ್ತೇವೆ.

ಸೃಷ್ಟಿಯ ಮೂಲವನ್ನು ಸಾರುತ್ತಾ ಹೊರಡುವ ಮಾದೇಶ್ವರ ತನ್ನ ನೆಲೆಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಾನೆ. ಇಂತಹ ಪ್ರಯತ್ನಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಪ್ರಸಂಗ ಬೇವಿನಕಟ್ಟೆ ಕಾಳಮ್ಮನ ಸಾಲು.

**ಪಿತೃಮೂಲವನ್ನು ಸ್ಥಿರಗೊಳಿಸುವ ಹೋರಾಟ:**

ದಟ್ಟ ಕಾಡಿನಲ್ಲಿ ಬೇವಿನಕಟ್ಟೆ ಜಾಗದಲ್ಲಿ ಕೃಷಿ ರೂಢಿಸಿಕೊಂಡು ತನ್ನ ಕುಲ ವೃತ್ತಿಯಾದ ಕುರಿಗಳನ್ನು ಉಳಿಸಿಕೊಂಡು ಕೆಂಡೇಗೌಡ ಮತ್ತು ಕಾಳಮ್ಮನ ಕುಟುಂಬ ಅಭಿವೃದ್ಧಿ ಪಥದಲ್ಲಿತ್ತು. ಏಳು ಗಂಡುಮಕ್ಕಳ ತಾಯಿಯಾಗಿ ಮನೆ ತುಂಬಾ ಧಾನ್ಯ, ಹೊನ್ನು ತುಂಬಿಕೊಂಡು ತನ್ನ ಮನೆದೇವರುಗಳಾದ ಬಿಳಿಗಿರಿರಂಗನಾಥ, ವೆಂಕಟರಮಣ ಮತ್ತು ಹೆಣ್ಣು ದೇವತೆಗಳಾದ ಅಕ್ಕಮ್ಮ, ಚಿಕ್ಕಮ್ಮ, ಚಿಕ್ಕದೇವಿ, ಬಲಮಕಾಳಿ, ತಿಂಬಾದೇವಿ, ಹೊನ್ನಾದೇವಿ, ಬಂಡಿರಸಿಯರಿಗೆ ಮೀಸಲಾಗಿದ್ದ ಕುಟುಂಬವನ್ನು ತನ್ನ ಒಕ್ಕಲಾಗಿ ಮಾಡಿಕೊಳ್ಳಲು ಮಾದೇಶ್ವರ ನಿಶ್ಚಯಿಸುತ್ತಾನೆ. ಮನೆ ಒಡತಿಯಾದ ಕಾಳಮ್ಮನಲ್ಲಿ ಎಳ್ಳು ಭಿಕ್ಷವನ್ನು

ಬೇಡುತ್ತಾನೆ. ಇಲ್ಲಿ ಭಿಕ್ಷೆ ಬೇಡುವ ಪದ್ಧತಿ ಮುಖ್ಯವಾಗಿ ತನ್ನ ಒಕ್ಕಲು ಮನೆಗಳಲ್ಲಿ ಮಾತ್ರವಾಗಿರುತ್ತದೆ. ಕಾಳಮ್ಮ ತನ್ನ ಒಕ್ಕಲನ್ನು ಬದಲಿಸಿಕೊಳ್ಳಲು ಇಷ್ಟವಾಗದೆ ಮಾದೇಶ್ವರನಿಗೆ ಭಿಕ್ಷೆ ನೀಡಲು ನಿರಾಕರಿಸುತ್ತಾಳೆ. ಇದನ್ನು ಕುರಿತಂತೆ ಶ್ರೀ ಬೋರಲಿಂಗಯ್ಯ ಅವರು ಹೀಗೆ ಬರೆಯುತ್ತಾರೆ. "ಭಿಕ್ಷೆ ನೀಡುವುದರಿಂದ ಅವಳ ಎಳ್ಳುಧಾನ್ಯ ಕಡಿಮೆಯಾಗುತ್ತದೆ ಎನ್ನುವುದಕ್ಕಿಂತ ಭಿಕ್ಷೆ ಕೊಡುವ ಮೂಲಕ ಮಾದಯ್ಯನ ಹೆಚ್ಚಾಳತನಕ್ಕೆ ಬಗ್ಗುವುದಿಲ್ಲ ಅಥವಾ ಶರಣಾಗುವುದಿಲ್ಲ ಎಂಬ ಹಠ ಇಲ್ಲಿ ಗಮನ ಸೆಳೆಯುತ್ತದೆ. ಈ ಹಠವನ್ನು ಕಾವ್ಯದಲ್ಲಿ ಜಿಪುಣತನ ಎಂದು ವರ್ಣಿಸಲಾಗಿದೆಯಾದರೂ ಅದು ಅವಳ ಸ್ವಾಭಿಮಾನವಾಗಿಯೇ ಮೆರೆಯುತ್ತದೆ." ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ ಭಾರತದಲ್ಲಿ ನಡೆದ ವೈಷ್ಣವ ಮತ್ತು ಶೈವಗಳ ಧಾಳಿ ಗ್ರಾಮದೇವತೆಗಳ ಆರಾಧನಾ ನೆಲೆಗಳನ್ನು ತಮ್ಮ ನೆಲೆಗಳನ್ನಾಗಿಸಿಕೊಳ್ಳುವ ಹೋರಾಟ. ಏಕದೇವೋಪಾಸನೆಯ ನೆಲೆಗಳನ್ನಾಗಿ ಪರಿವರ್ತಿಸುವ ನೆಲೆಗಳು ಕರ್ನಾಟಕದಲ್ಲಿ ವಚನ ಚಳುವಳಿ ಮತ್ತು ದಾಸ ಪಂಥದ ವಿಕಾಸಗಳಲ್ಲಿ ನೋಡಬಹುದಾಗಿದೆ. ಎಲ್ಲಿ ದಾನ ಪಡೆಯುವುದಷ್ಟೇ ಉದ್ದೇಶವಲ್ಲ, ಜೀವನ ಪದ್ಧತಿಯನ್ನೇ ಬದಲಿಸುವ ಕ್ರಮ. ಸ್ತ್ರೀ ಒಡೆತನದ ಕುಟುಂಬಗಳನ್ನು ಪಿತೃ ಒಡೆತನದ ಕುಟುಂಬಗಳನ್ನಾಗಿಸುವ ಕ್ರಮ. ಬಹುದೇವತೆಗಳ ಆರಾಧನೆಯಿಂದ ಏಕದೇವೋಪಾಸನೆಯ ಕಡೆಯ ಚಲನೆ. ಇಂತಹ ಚಲನೆಯಲ್ಲಿ ಬಹುಪಾಸಕರ ಮಾರಣಹೋಮ ನಡೆದಿರುವುದು ಸುಳ್ಳಲ್ಲ. ಇದಕ್ಕೆ ಕಾಳಮ್ಮನ ಪ್ರಸಂಗವೇ ಸಾಕ್ಷಿ. ಇದಲ್ಲದೆ ಮಂಟೇಸ್ವಾಮಿ ಕಾವ್ಯದ ದೊಡ್ಡಮ್ಮ ತಾಯಿ ಪ್ರಸಂಗಗಳು ಉದಾಹರಣೆಯಾಗಿವೆ.

ಗ್ರಂಥಋಣ:

೧] ಬುಡಕಟ್ಟು ಮಹಾಕಾವ್ಯ ಮಾಲೆ: ಮಂಟೇಸ್ವಾಮಿ
ಸಂ: ಪ್ರೊ. ಹಿ.ಚಿ.ಬೋರಲಿಂಗಯ್ಯ, ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭
೨] ಬುಡಕಟ್ಟು ಮಹಾಕಾವ್ಯ ಮಾಲೆ: ಮಲೆಮಾದೇಶ್ವರ
ಸಂ: ಡಾ. ಕೆ. ಕೇಶವನ್ ಪ್ರಸಾದ್, ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭
೩] ಸಾಂಸ್ಕೃತಿಕ ಮುಖಾಮುಖಿ: ಮಂಟೇಸ್ವಾಮಿ ಕಾವ್ಯ
ಸಂ: ಶ್ರೀ ವೆಂಕಟೇಶ ಇಂದ್ವಾಡಿ, ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪
೪] ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು:
ಲೇಖಕರು: ಡಾ. ಜಿ.ಶಂ.ಪರಮಶಿವಯ್ಯ